ಆ) ಹಾಗಿದ್ದಲ್ಲಿ, ಇಲ್ಲಿನ ನಿವಾಸಿಗಳಿಗೆ ಸಮರ್ಪಕವಾಗಿ ಮೂಲಭೂತ ಸೌಕರ್ಯಗಳನ್ನು ನೀಡಲಾಗುತ್ತಿದೆಯೇ: (ರಸ್ತೆ ನಿರ್ವಹಣೆ ಒಳಗೊಂಡಂತೆ ವಿವರ ನೀಡುವುದು)

ಇ) ಕೆ.ಹೆಚ್.ಬಿ. ಕಾಲೋನಿಯನ್ನು ಮಂಡ್ಯ ನಗರಸಭೆಗೆ ಈವರೆವಿಗೆ ವಹಿಸದಿರಲು ಕಾರಣಗಳೇನು; ಯಾವಾಗ ಮಂಡ್ಯ ನಗರ ಸಭೆಗೆ ವಹಿಸಲಾಗುತ್ತದೆ; ಈ ದಿಶೆಯಲ್ಲಿ ಕೆ.ಹೆಚ್.ಬಿ. ಆಡಳಿತ ಮಂಡಳಿಯ ಪ್ರಯತ್ನಗಳೇನು? (ವಿವರ ನೀಡುವುದು)

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಹೌದು, ಕರ್ನಾಟಕ ಗೃಹ ಮಂಡಳಿಯಿಂದ ಸಾಕಷ್ಟು ಬಾರಿ ಬಡಾವಣೆ ಹಸ್ತಾಂತರಿಸಿಕೊಳ್ಳುವಂತೆ ನಗರ ಸಭೆಯನ್ನು ಕೋರಿದ್ದರೂ ಸಹ ಇದುವರೆವಿಗೂ ನಗರಸಭೆಯವರು ಸದರಿ ಕಾಲೋನಿಯನ್ನು ಹಸ್ತಾಂತರಿಸಿಕೊಂಡಿರುವುದಿಲ್ಲ. ಆದುದರಿಂದ ಈ ಬಡಾವಣೆಯು ಕರ್ನಾಟಕ ಗೃಹ ಮಂಡಳಿಯ ಸ್ವಾಮ್ಯದಲ್ಲಿಯೇ ಇರುತ್ತದೆ.

ಆ) ರಸ್ತೆ ನಿರ್ವಹಣೆಯ ಕಾರ್ಯವನ್ನು ಮಂಡಳಿಯು ಕೈಗೊಂಡಿರುವುದಿಲ್ಲ. ಆದರೆ ನೀರಿನ ವ್ಯವಸ್ಥೆ ಮತ್ತು ಒಳಚರಂಡಿ ನಿರ್ವಹಣೆಯನ್ನು ಮಾತ್ರ ಮಂಡಳಿಯು ಕೈಗೊಂಡಿರುತ್ತದೆ.

ಇ) ಈ ವಿಚಾರವಾಗಿ ಆಯುಕ್ತರು, ಕರ್ನಾಟಕ ಗೃಹ ಮಂಡಳಿಯವರು ಮತ್ತು ಮಂಡ್ಯ ಜಿಲ್ಲಾ ಯೋಜನಾ ಘಟಕವು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡಿ ಪೌರಾಡಳಿತ ಆಯುಕ್ತರವರಿಗೂ ಪತ್ರ ಬರೆದು ಮತ್ತು ಮಂಡ್ಯ ನಗರಸಭೆಯವರೊಂದಿಗೆ ಸದರಿ ಬಡಾವಣೆಯನ್ನು ಜಂಟಿ ಪರಿಶೀಲನೆ ಮಾಡಿಸಲಾಗಿದ್ದು ಮತ್ತು ಜಿಲ್ಲಾಧಿಕಾರಿಗಳು ಹಲವಾರು ಬಾರಿ ಹಸ್ತಾಂತರ ಮಾಡಿಕೊಳ್ಳುವಂತೆ ಆದೇಶವಿತ್ತಿದ್ದರೂ ಸಹ ನಗರ ಸಭೆಯವರು ಇಲ್ಲಿಯವರೆವಿಗೂ ಹಸ್ತಾಂತರಿಸಿಕೊಂಡಿರುವುದಿಲ್ಲ. ದಿನಾಂಕ. 14.5.2003 ರಂದು ಜಿಲ್ಲಾಧಿಕಾರಿಯವರು, ಮಂಡ್ಯರವರ ಕಛೇರಿಯಲ್ಲಿ ನಡೆಸಿದ ಸಭೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ, ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಹಾಗೂ ಇತರೇ ಎಲ್ಲಾ ಅಧಿಕಾರಿಗಳ ಸಮ್ಮುಖದಲ್ಲಿ ಕೈಗೊಂಡ ನಡವಳಿಯ ತೀರ್ಮಾನದಂತೆ ಹೊಸಹಳ್ಳಿ ಕಾಲೋನಿಯನ್ನು ಹಸ್ತಾಂತರಿಸಿಕೊಳ್ಳುವ ಬಗ್ಗೆ ಮಂಡಳಿಯು ರೂ. 5.00 ಲಕ್ಷಗಳನ್ನು ಮಂಡ್ಯ ನಗರಸಭೆಗೆ ಪಾವತಿಸಿದಲ್ಲಿ ಹಸ್ತಾಂತರಿಸಿಕೊಳ್ಳುವುದಾಗಿ ನಡುವಳಿ ಆದೇಶದಲ್ಲಿ ನಿರ್ಣಯವಾಗಿದೆ. ಈ ನಿರ್ಣಯದಂತೆ ಹಣ ಪಾವತಿ ಮಾಡುವ ಬಗ್ಗೆ ಮಂಡಳಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಸಧ್ಯದಲ್ಲಿಯೇ ಸದರಿ ಕಾಲೋನಿಯನ್ನು ಮಂಡ್ಯ ನಗರ ಸಭೆಗೆ ಹಸ್ತಾಂತರಿಸಲು ಕ್ರಮ ಕೈಗೊಳ್ಳಲಾಗುವುದು.

ಮಂಡ್ಯ ಜಿಲ್ಲೆಯಲ್ಲಿ "ಡೆಂಗ್ಯೂ ಜ್ವರ"ದ ಭೀತಿ

3509(3830) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ "ಡೆಂಗ್ಯೂ ಜ್ವರ"ವೇನಾದರೂ ಕಾಣಿಸಿಕೊಂಡಿದೆಯೇ;

ಆ) ಇದರ ನಿಯಂತ್ರಣಕ್ಕಾಗಿ ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಹಾಗಿದ್ದಲ್ಲಿ ಇದರ ಬಗೆಗಿನ ವಿವರ ನೀಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಕಾಣಿಸಿಕೊಂಡಿದೆ.

2003ನೇ ಸಾಲಿನಲ್ಲಿ ಜನವರಿಯಿಂದ ಇಲ್ಲಿಯವರೆಗೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 48 ಡೆಂಗ್ಯೂ ಜ್ವರ ಪ್ರಕರಣಗಳು ವರದಿಯಾಗಿದೆ.

ದಿನಾಂಕ 1-7-03

ತಾಲ್ಲೂಕುವಾರು ಪ್ರಕರಣಗಳ ವಿವರ:

ಮಂಡ್ಯ: 25, ನಾಗಮಂಗಲ: 13, ಮದ್ದೂರು: 6, ಮಳವಳ್ಳಿ: 4

ಆ) ಹೌದು

ಇ) ಡೆಂಗ್ಯೂ ಜ್ವರ ನಿಯಂತ್ರಣಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಮಂಡ್ಯ ಜಿಲ್ಲೆಯೂ ಸೇರಿದಂತೆ ಎಲ್ಲಾ ಜಿಲ್ಲೆಗಳಿಗೂ ಮುಂಜಾಗ್ರತಾ ಕ್ರಮವಾಗಿ ಡೆಂಗ್ಯೂ ಜ್ವರ ತಡೆಗಟ್ಟುವ ನಿಯಂತ್ರಣ ಕ್ರಮಗಳಿಗೆ ಸನ್ನದ್ದರಾಗಿರುವಂತೆ ಮುನ್ಸೂಚನಾ ಸುತ್ತೋಲೆಗಳನ್ನು ಕಳುಹಿಸಿ ಎಚ್ಚರಿಸಲಾಗಿದೆ.
2. ಮಂಡ್ಯ ಜಿಲ್ಲೆಯಲ್ಲಿ ಜ್ವರ ಪೀಡಿತರಿಂದ ಇದುವರೆಗೆ 146 ರಕ್ತದ ಮಾದರಿಗಳನ್ನು ಸಂಗ್ರಹಿಸಿ, ರಾಷ್ಟ್ರೀಯ ವೈರಾಣು ಸಂಸ್ಥೆ, ಬೆಂಗಳೂರು ಇಲ್ಲಿಗೆ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದು ಇದರಲ್ಲಿ 46 ಮಾದರಿಗಳು ಡೆಂಗ್ಯೂಜ್ವರ ಪೀಡಿತವೆಂದು ತಿಳಿದುಬಂದಿದೆ.
3. ಡೆಂಗ್ಯೂ ಜ್ವರ ಶಂಕಿತ ರೋಗಿಗಳಿಂದ ರಕ್ತ ಮಾದರಿ ಸಂಗ್ರಹಿಸಿ ಪರೀಕ್ಷೆಗಾಗಿ ರಾಷ್ಟ್ರೀಯ ವೈರಾಣು ಸಂಸ್ಥೆಗೆ ಕಳುಹಿಸಿಕೊಡುವ ವ್ಯವಸ್ಥೆಯನ್ನು ಮುಂದುವರೆಸಲಾಗಿದೆ.
4. ಪ್ರಾಥಮಿಕ ಆರೋಗ್ಯ ಕೇಂದ್ರ : ಆಸ್ಪತ್ರೆಗಳಲ್ಲಿ ಡೆಂಗ್ಯೂ ಜ್ವರ : ಡೆಂಗ್ಯೂ ರಕ್ತಸ್ರಾವ ಜ್ವರ ಪ್ರಕರಣಗಳಿಗೆ ತುರ್ತಾಗಿ ಬೇಕಾಗುವ ನಿರ್ವಹಣಾ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ.
5. ಡೆಂಗ್ಯೂ ಜ್ವರ ತಲೆದೋರಿದ ಪ್ರದೇಶಗಳಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆದು ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ.
6. ಡೆಂಗ್ಯೂ ಜ್ವರ ಹರಡಿರುವ ಪ್ರದೇಶಗಳಲ್ಲಿ, ಕೀಟ ನಾಶಕದ ಧೂಮೀಕರಣ ಕೈಗೊಂಡು ಸೋಂಕು ಹರಡುವ ಸೊಳ್ಳೆಗಳನ್ನು ನಾಶಪಡಿಲಾಗುತ್ತಿದೆ.
7. ಗ್ರಾಮಾಂತರ ಪ್ರದೇಶಗಳಲ್ಲಿ ಆರೋಗ್ಯ ಕಾರ್ಯಕರ್ತರ ಸಹಾಯದಿಂದ ಮತ್ತು ಕೀಟ ಶಾಸ್ತ್ರಜ್ಞರಿಂದ ಸಮಸ್ಯಾತ್ಮಕ ಭೇಟಿ ನೀಡಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿ ಕಾರಣಗಳನ್ನು ಸಮೀಕ್ಷೆ ನಡೆಸಿ ಅವುಗಳ ನಿರ್ಮೂಲನಕ್ಕಾಗಿ ಕ್ರಮ ಕೈಗೊಳ್ಳಲಾಗಿದೆ.
8. ಆರೋಗ್ಯ ಶಿಕ್ಷಣಕ್ಕಾಗಿ ಭಿತ್ತಿ ಪತ್ರಗಳನ್ನು ಕಿರುಹೊತ್ತಿಗೆಗಳನ್ನು ಮುದ್ರಿಸಿ ಹಂಚಲಾಗುತ್ತಿದೆ ಹಾಗೂ ಈ ರೋಗದ ನಿಯಂತ್ರಣದಲ್ಲಿ ಜನತೆಯ ಪಾತ್ರದ ಬಗ್ಗೆ ಅರಿವುಮೂಡಿಸಲಾಗುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿನ ಸಿ.ಬಿ.ಎಸ್.ಇ. ಹಾಗೂ ಐ.ಸಿ.ಎಸ್.ಇ. ಬೋಧನಾ ಕ್ರಮವುಳ್ಳ ಶಾಲೆಗಳು

3510(3831) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಸಿ.ಬಿ.ಎಸ್.ಇ. ಹಾಗೂ ಐ.ಸಿ.ಎಸ್.ಇ. ಪಠ್ಯ ಮತ್ತು ಬೋಧನಾ ಕ್ರಮವುಳ್ಳ ಶಾಲೆಗಳು ಇವೆಯೇ:

ಆ) ಹಾಗಿದ್ದಲ್ಲಿ ವಿವರ ನೀಡುವುದು?